- -

ಎಮ್ ವಿ ಸಿ ನಂಃ 376/2021 ಪಿ.ಡಬ್ಲ್ಯೂ (1)

**ದಿನಾಂಕಃ 06-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಆರ್ ಎಸ್ ಬಿ ವಕೀಲರಿಂದಃ**

ಅಪಲಘಾತ ಕಾಲಕ್ಕೆ ನನ್ನ ಗಂಡ ನೀಲಕಂಠಪ್ಪನ ವಯಸ್ಸು 68 ಇತ್ತು. ಆತನಿಗೆ ಬಿ.ಪಿ. ಇತ್ತು ಎಂದರೆ ಸರಿ, ಶುಗರ್ ಇರಲಿಲ್ಲ, ಅವರಿಗೆ ಚಸ್ಮಾ ಬಂದಿತ್ತು ಎನ್ನುವುದು ಸರಿಯಲ್ಲ. ನಾನು ಅಪಘಾತವಾಗುವುದು ನೋಡಲಿಲ್ಲ ಎಂದರೆ ಸರಿ, ಆದರೆ ಬಿದ್ದ ತಕ್ಷಣ ನಾನು ಓಡಿ ಹೋದೆ ಜನ ಸೇರಿದರು. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ವಿಷಯ ಗೊತ್ತಿದೆ.

2. ನನ್ನ ಗಂಡ ನಡೆಯುತ್ತಾ ಹೋಗುವಾಗ ದಿನಾಂಕಃ- 12-08-2020 ರ ರಾತ್ರಿ 8-30 ಗಂಟೆಗೆ ಈ ಅಪಘಾತವಾಗಿದೆ ಎಂದು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಯಿಸಿಲ್ಲ, ನಿಂತಾಗ ಅಂತಾ ಈ ಅಪಘಾತ ಅಂತಾ ಬರೆಯಿಸಿದ್ದೇನೆ. ರಸ್ತೆಗಳ ಮದ್ಯೆ ಇರುವುದೇ ಡಿವೈಡರ್ ಎಂದರೆ ಸರಿ. ಆ ಡಿವೈಡರ್ ಗೆ ಹೊಂದಿಕೊಂಡು ನನ್ನ ಗಂಡ ನಿಂತಿದ್ದ. ಹುಡ್ಕೊ ಕಾಲೋನಿ ಪಾದಚಾರಿಗಳಿಗೆ ಹೋಗಲು ಎರಡುಬದಿ 5 ಪೀಟ ಅಗಲದ ರಸ್ತೆ ಬಿಟ್ಟಿದ್ದಾರೆ ಎಂದರೆ ಸರಿ. ಅಲ್ಲಿ ರಸ್ತೆ ದಾಟಲು ಅವಕಾಶ ಮಾಡಿಲ್ಲ ಎನ್ನುವುದು ಸರಿ.

3. ಈ ಅಪಘಾತ ನನ್ನ ಗಂಡನ ತಪ್ಪಿನಿಂದ ಆಯಿತು ಎನ್ನುವುದು ಸರಿಯಲ್ಲ. ಆತ ಡಿವೈಡರ್ ಪಕ್ಕ ನಿಂತಾಗ ಈ ಅಪಘಾತವಾಗಿದೆ. ಅಪಘಾತವಾದ ತಕ್ಷಣ ಜಿಲ್ಲಾಸ್ಪತ್ರೆ ಕೊಪ್ಪಳಕ್ಕೆ ತೆಗೆದುಕೊಂಡು ಹೋದೆವು, ನಂತರ ಹುಬ್ಬಳ್ಳಿ ತತ್ವದರ್ಶಿನಿ ಆಸ್ಪತ್ರೆಗೆ ತೆಗೆದುಕೊಂಡು ಹೋದೆವು, ಅಲ್ಲಿ 7 ದಿನ ಇದ್ದೇವು, ಆಸ್ಪತ್ರೆಯಲ್ಲೆ ನನ್ನ ಗಂಡ ಮರಣ ಹೊಂದಿದ.

4. ಅಪಘಾತ ಕಾಲಕ್ಕೆ ನನ್ನ ಗಂಡ ನಿವೃತ್ತ ರೆವಿನ್ಯೂ ಇನ್ಸ್‌ಪೆಕ್ಟರ್ ಇದ್ದ. ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಮಾಡಿದ ಖರ್ಚಿನ ಹಣ ಕೆಜಿಐಡಿಯಿಂದ ಪಡೆದಿದ್ದೆ ಎನ್ನುವುದು ಸರಿಯಲ್ಲ. ಎಲ್ಲಾ ಹಣ ಪಡೆದಿದ್ದರೂ ಸಹ ಸುಳ್ಳು ಹೇಳಿದೆ ಎಂದರೆ ಸರಿಯಲ್ಲ.

5. ನನ್ನ ಗಂಡ ಮರಣ ಹೊಂದಿದ ನಂತರ ತತ್ವದರ್ಶಿನಿ ಆಸ್ಪತ್ರೆಯಲ್ಲಿ ಪೊಲೀಸರು ಶವ

ಮಹಜರ್ ಮಾಡಿದರು, ನಂತರ ಗದಗ ಜಿಲ್ಲೆಯ ನಮ್ಮೂರು ಗದುಗಿನಹಾಳಕ್ಕೆ ತೆಗೆದುಕೊಂಡು ಹೋಗಿ ಶವಸಂಸ್ಕಾರ ಮಾಡಿದ್ದೇವೆ. ಶವಪಂಚನಾಮೆ ಮಾಡುವಾಗ ನಮ್ಮನ್ನು ಪೊಲೀಸರು ಹೊರ ನಿಲ್ಲಿಸಿದ್ದರು. ಪಿ.ಎಂ. ಮಾಡಿದ್ದಾರೆ. ನನ್ನ ಗಂಡನಿಗೆ ಅಪಘಾತವಾಗುವ ಪೂರ್ವದಲ್ಲೆ ಕರೋನಾ ಬಂದಿತ್ತು ಎನ್ನುವುದು ಸರಿಯಲ್ಲ. ನಾನು ಹಾಜರುಪಡಿಸಿದ ನಿಪಿ 4 ಪಿಎಂ ವರದಿ ಪ್ರಕಾರ "death is due to respiratory failure consequent of injuries sustained with Covid-19 positive status" ಎಂದು ಕಾಣಿಸಿದೆ ಎಂದರೆ ಸರಿ, ಮರಣ ಹೊಂದಿದಾಗ ಆತನಿಗೆ ಕೋವಿಡ್ 19 ಇತ್ತು ಎನ್ನುವುದು ಸರಿಯಲ್ಲ.

6. ತತ್ವದರ್ಶಿ ಆಸ್ಪತ್ರೆಯಲ್ಲಿ ಕೋವಿಡ್ 19 ಗೆ ಸಂಬಂಧಿಸಿದ ಚಿಕಿತ್ಸೆಯನ್ನೇ ಕೊಡಲಾಗಿದೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಕೋವಿಡ್ 19 ಇದುದ್ದರಿಂದ ತಾನೇ ಬಿದ್ದು ಗಾಯಪಡಿಸಿಕೊಂಡ ಎನ್ನುವುದು ಸರಿಯಲ್ಲ. ಆತನಿಗೆ ಮೋಟಾರ್ ಸೈಕಲ್ ನ ಕಎ 37/ಇಜೆ 5002 ಡಿಕ್ಕಿ ಮಾಡಿಲ್ಲ ಎನ್ನುವುದು ಸರಿಯಲ್ಲ. ಎದುರುದಾರರಿಂದ ಹಣ ಪಡೆಯಬೇಕೆಂದುಕೊಂಡು ಈಗ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಗಂಡನಿಗೆ ರಾತ್ರಿ ವೇಳೆ ಕಣ್ಣು ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ಎದುರುದಾರದ್ದು ಯಾವುದೇ ತಪ್ಪು ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂರದೆ ಸರಿಯಲ್ಲ. ನನ್ನ ಗಂಡ ಕರೋನಾ ರೋಗದಿಂದ ಮರಣ ಹೊಂದಿದ ಎಂದರೆ ಸರಿಯಲ್ಲ. ಈ ಅಪಘಾತದಿಂದ ಮರಣ ಹೊಂದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಎದುರುದಾರ ನಂ. 1 ಮತ್ತು 2 ಪರಿಹಾರ ಕೊಡುವ ಬಾಧ್ಯಸ್ಥಿಕೆ ಹೊಂದಿಲ್ಲ ಎಂದರೆ ಸರಿಯಲ್ಲ. ಎದುರುದಾರಿಂದ ಪರಿಹಾರ ಕೊಡಬೇಕೆಂಬ ಉದ್ದೇಶದಿಂದ ಸೃಷ್ಟಿ ಮಾಡಿ ತಂದು ಮೆಡಿಕಲ್ಲ ಬಿಲ್ಲು ಹಾಜರುಪಡಿಸಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.
ಸಹಿ/-
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ಕೊಪ್ಪಳ.**